<u>**ಕರ್ನಾಟಕ ವಿಧಾನ ಪರಿಷತ್ತು**</u>

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 562 |
| 2 | ಸದಸ್ಯರ ಹೆಸರು | : | ಡಾ: ಆರತಿ ಕೃಷ್ಣ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 20-08-2026 |
| 4 | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ದಕ್ಷಿಣ ಪದ್ಮನಾಭನಗರ ಕ್ಷೇತ್ರ ವ್ಯಾಪ್ತಿಯ, ಚಿಕ್ಕಲಸಂದ್ರ ಕೆರೆ ಹಾಗೂ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಈ ಹಿಂದೆ ಕಂದಾಯ ಇಲಾಖೆ ಹಾಗೂ ಬಿ.ಬಿ.ಎಂ.ಪಿ (BBMP) ನೇತೃತ್ವದಲ್ಲಿ ಮಾಡಲಾಗಿದ್ದರೂ ಸಹ, ಮತ್ತೆ ಒತ್ತುವರಿ ಮಾಡಿ, ಅನಧಿಕೃತ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದು ಹಾಗೂ ಕೆರೆ ಅಂಗಳದಲ್ಲಿ ಕಸ ವಿಲೇವಾರಿ ಮಾಡಲು ಬಳಕೆಯಾಗುತ್ತಿರುವುದರಿಂದ ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ; | ನಂ. ಪಿ.ಡಬ್ಲ್ಯುಡಿ 82 ಐ ಎನ್ ಬಿ 85, ದಿನಾಂಕ: 26-07-1985 ರಲ್ಲಿ ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶದಲ್ಲಿ ಇರುವ ಕೆರೆಗಳ ಸಂರಕ್ಷಣೆ, ಪುನರ್‌ಸ್ಥಾಪನೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ಶ್ರೀ ಲಕ್ಷ್ಮಣ್ ರಾವ್ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯ ವರದಿಯಲ್ಲಿ ಚಿಕ್ಕಲಸಂದ್ರ ಕೆರೆಯು ಸ್ವರೂಪ ಕಳೆದುಕೊಂಡಿರುವ ಬಗ್ಗೆ ಉಲ್ಲೇಖವಿದೆ. ಬೆಂಗಳೂರು ದಕ್ಷಿಣ ಪದ್ಮನಾಭನಗರ ಕ್ಷೇತ್ರ ವ್ಯಾಪ್ತಿಯ, ಚಿಕ್ಕಲಸಂದ್ರ ಕೆರೆ ಹಾಗೂ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಕಂದಾಯ ಇಲಾಖೆಯಿಂದ ಕೈಗೊಂಡು ತಂತಿ ಬೇಲಿ ಅಳವಡಿಸಲಾಗಿರುತ್ತದೆ. ಅದರಂತೆ ಸದರಿ ಪ್ರದೇಶಗಳಲ್ಲಿ ಒತ್ತುವರಿಯಾಗದಂತೆ ತಡೆಯಲಾಗಿರುತ್ತದೆ.<br><br>ಚಿಕ್ಕಲಸಂದ್ರ ಕೆರೆಯು ಕೆರೆ ಸ್ವರೂಪ ಕಳೆದುಕೊಂಡಿರುವ ಪ್ರದೇಶವಾಗಿದ್ದು, ಕೆರೆಗೆ ಸಂಬಂಧಿಸಿದಂತೆ ಯಾವುದೇ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಬೆಂಗಳೂರು ದಕ್ಷಿಣ ನಗರ ಪಾಲಿಕೆ ವತಿಯಿಂದಾಗಲಿ ಅಥವಾ ಈ ಹಿಂದಿನ ಬಿ.ಬಿ.ಎಂ.ಪಿ ವತಿಯಿಂದಾಗಲಿ ಕೈಗೊಂಡಿರುವುದಿಲ್ಲ.<br><br>ಮನೆ ಮನೆಗಳಿಂದ ಆಟೋ ಟಿಪ್ಪರ್‌ಗಳಲ್ಲಿ ಸಂಗ್ರಹವಾಗುವ ಹಸಿ ಕಸವನ್ನು ಕಂಪ್ಯಾಕ್ಟರ್ ವಾಹನಕ್ಕೆ ವರ್ಗಾಯಿಸಲು ಸ್ಥಳದ ಅಭಾವವಿರುವುದರಿಂದ ಕೆರೆಯ ಬದಿಯ ರಸ್ತೆ ಮೇಲೆ ತಾತ್ಕಾಲಿಕವಾಗಿ ಬಳಕೆ ಮಾಡಲಾಗುತ್ತಿದೆ. ಇದನ್ನು ನಿಲ್ಲಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ. |
| ಆ) | ಇದ್ದಲ್ಲಿ ಅಧಿಕೃತವಾಗಿ ಗುರುತಿಸಲಾದ ಚಿಕ್ಕಲಸಂದ್ರ (ಸರ್ಕಾರಿ ದಾಖಲೆಗಳ ಪ್ರಕಾರ ಎಷ್ಟು ಎಕರೆ ಎಂಬ ನಿಖರವಾದ ಮಾಹಿತಿ ನೀಡುವುದು) ಕೆರೆಯ ಅಂಗಳದಲ್ಲಿ ನಿರ್ಮಿತ ಅನಧಿಕೃತ ಕಟ್ಟಡಗಳ ಶಾಶ್ವತ ತೆರವಿಗೆ ವಿಳಂಬವಾಗುತ್ತಿರುವುದಕ್ಕೆ ಸೂಕ್ತ ಕಾರಣಗಳೇನು; ಹಾಗೂ ಒತ್ತುವರಿ ತೆರವುಗೊಳಿಸಲು (GBA) ಯಾವಾಗ ಕ್ರಮವಹಿಸುತ್ತದೆ; | ಸರ್ಕಾರಿ ದಾಖಲೆಗಳ ಪ್ರಕಾರ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಚಿಕ್ಕಲಸಂದ್ರ ಗ್ರಾಮ ಸರ್ವೆ ನಂ.76 ರಲ್ಲಿ ಒಟ್ಟು 12 ಎಕರೆ 26 ಗುಂಟೆ ಚಿಕ್ಕಲಸಂದ್ರ ಕೆರೆ ಪ್ರದೇಶವಿದ್ದು, ಅದರಲ್ಲಿ ಸುಮಾರು 9 ಎಕರೆ ಪ್ರದೇಶವು 40 ವರ್ಷಗಳ ಹಿಂದೆಯೇ ಮತ್ತು ಪಾಲಿಕೆಗೆ ಹಸ್ತಾಂತರಿಸುವ ಮುನ್ನವೇ ಒತ್ತುವರಿಯಾಗಿರುತ್ತದೆ. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆರವರಿಗೆ ಸದರಿ ಕೆರೆಯ ಪ್ರದೇಶದ ಸರ್ವೆಕಾರ್ಯ ಕೈಗೊಂಡು, ಗಡಿಬಾಂದುಗಳನ್ನು ಭೌತಿಕವಾಗಿ ಗುರುತಿಸಿ |

. . . 2 .

| | | |
|---|---|---|
| | | ಕೊಡಲು ಕೋರಿ ಪತ್ರ ಬರೆದಿದ್ದು, ಜಿಲ್ಲಾಧಿಕಾರಿಗಳ ನಿರ್ದೇಶನದಂತೆ, ಗಡಿಬಾಂದುಗಳನ್ನು ಗುರುತಿಸಿಕೊಟ್ಟ ಬಳಿಕ, ಕಂದಾಯ ಇಲಾಖೆಯ ಸಹಯೋಗದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕೆರೆ ಒತ್ತುವರಿಗೆ ಸಂಬಂಧಿಸಿದಂತೆ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 38401/2014ರ ಆದೇಶದ ಅನುಸಾರ ಸರ್ಕಾರದ ಆದೇಶ ಸಂಖ್ಯೆ: ನಅಇ 250 ಎಂಎನ್‌ವೈ 2018 (ಭಾಗ-3), ದಿನಾಂಕ: 28-08-2023 (1) ಮತ್ತು ಸರ್ಕಾರದ ಆದೇಶ ಸಂಖ್ಯೆ: ನಅಇ 250 ಎಂಎನ್‌ವೈ 2018 (ಭಾಗ-3), ದಿನಾಂಕ:28-08-2023 (2) ರಲ್ಲಿ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆಯನ್ವಯ ಜವಾಬ್ದಾರಿಯನ್ನು ನಿರ್ವಹಿಸಲು ನೇಮಿಸಿದ ಸಕ್ಷಮ ಅಧಿಕಾರಿಯ (Designated Officer) ಮೂಲಕ ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗುತ್ತದೆ. |
| ಇ) | ಸದರಿ ಕೆರೆಯಂಗಳದಲ್ಲಿ ಕಸ ವಿಲೇವಾರಿಗಾಗಿ ಅನುಸರಿಸುತ್ತಿರುವ ಅವೈಜ್ಞಾನಿಕ ಕ್ರಮಗಳಿಂದಾಗಿ ಮಳೆಗಾಲದಲ್ಲಿ ನೀರಿನ ಸರಾಗ ವಿಲೇವಾರಿಯಾಗದಿರುವುದು,<br>ಸಾರ್ವಜನಿಕ ಸಂಚಾರ ಹಾಗೂ ಸುತ್ತ-ಮುತ್ತಲ ನಿವಾಸಿಗಳಿಗೆ ಆಗುತ್ತಿರುವ ಅನಾನುಕೂಲಗಳ ಪರಿಹಾರಕ್ಕೆ (GBA) ಆಡಳಿತ ಯಾವ ಕ್ರಮಗಳನ್ನು ತೆಗೆದುಕೊಳ್ಳಲಿದೆ? (ಮಾಹಿತಿ ನೀಡುವುದು) | ಕೆರೆಯು ಸ್ವರೂಪ ಕಳೆದುಕೊಂಡಿರುವುದರಿಂದ ಕೆರೆಗೆ ನೀರಿನ ಯಾವುದೇ ಒಳಹರಿವು/ಹೊರಹರಿವು ಇರುವುದಿಲ್ಲ.<br>ಮನೆ ಮನೆಗಳಿಂದ ಆಟೋ ಟಿಪ್ಪರ್‌ಗಳಲ್ಲಿ ಸಂಗ್ರಹವಾಗುವ ಹಸಿ ಕಸವನ್ನು ಕಂಪ್ಯಾಕ್ಟರ್ ವಾಹನಕ್ಕೆ ವರ್ಗಾಯಿಸಲು ಸ್ಥಳದ ಅಭಾವವಿರುವುದರಿಂದ ಕೆರೆಯ ಬದಿಯ ರಸ್ತೆ ಮೇಲೆ ತಾತ್ಕಾಲಿಕವಾಗಿ ಬಳಕೆ ಮಾಡುತ್ತಿದೆ.<br>ಈ ಕಾರ್ಯಕ್ಕಾಗಿ ಟ್ರಾನ್ಸ್‌ಫರ್ ಸ್ಟೇಷನ್ ಸ್ಥಾಪಿಸಲು ಮುಜರಾಯಿ ಇಲಾಖೆಗೆ ಒಳಪಟ್ಟ ಸರ್ವೆ ನಂ.63, ಜರಗನಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ನಗರ ಜಿಲ್ಲೆ ಇಲ್ಲಿನ 3.54 ಎಕರೆ ಜಾಗವನ್ನು ಭೋಗ್ಯದ ಆಧಾರದ ಮೇಲೆ ಒದಗಿಸಲು ಧಾರ್ಮಿಕ ದತ್ತಿ ಇಲಾಖೆಯನ್ನು ಕೋರಲಾಗಿದೆ. |

**ನಅಇ 591 ಎಂಎನ್‌ವೈ 2026 (ಇ)**

**(ಕೃಷ್ಣ ಬೈರೇಗೌಡ)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು